ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1202 (1489)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತ್‌ರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ಮುಜರಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ವಿಷಯ : OBC ಪ್ರಮಾಣ ಪತ್ರ ಪಡೆಯುವ ಬಗ್ಗೆ

(ಅ) ರಾಜ್ಯದ ವಿದ್ಯಾವಂತ ಯುವಕರಿಗೆ ಕೇಂದ್ರ ಸರ್ಕಾರಿ ಸೇವೆಗೆ ಸೇರಲು ಓ.ಬಿ.ಸಿ ಪ್ರಮಾಣ ಪತ್ರವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆಯೇ ; ಹಾಗಿದ್ದಲ್ಲಿ, ಇರುವ ಮಾರ್ಗ ಸೂಚಿಗಳೇನು;

(ಆ) ಓ.ಬಿ.ಸಿ ಪ್ರಮಾಣ ಪತ್ರವನ್ನು ಯಾವ ಯಾವ ಜಾತಿಗಳಿಗೆ ನೀಡಲಾಗುತ್ತಿದೆ ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಒಕ್ಕಲಿಗರಿಗೆ ಓ.ಬಿ.ಸಿ ಪ್ರಮಾಣ ಪತ್ರವನ್ನು ನೀಡುವ ಸಂಬಂಧ ಹಾಲಿ ಇರುವ ಮಾರ್ಗ ಸೂಚಿಗಳೇನು ;

(ಈ) ಈ ಪ್ರಮಾಣ ಪತ್ರ ಪಡೆಯಲು ನಗರ ಒಕ್ಕಲಿಗ ಮತ್ತು ಗ್ರಾಮೀಣ ಒಕ್ಕಲಿಗ ಎಂದು ವರ್ಗೀಕರಿಸಿರುವುದು ನಿಜವೇ ; ಹಾಗಾದರೆ, ಯಾವ ಒಕ್ಕಲಿಗರು ಈ ಪ್ರಮಾಣ ಪತ್ರವನ್ನು ಪಡೆಯಲು ಇರುವ ಮಾನದಂಡಗಳೇನು ? (ವಿವರವಾದ ಮಾಹಿತಿ ಒದಗಿಸುವುದು)